**ಹವಾಮಾನ ಮುನ್ಸೂಚನೆ:** ಜಿಲ್ಲೆಯಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ

### ರಂಜಾನ್ ರೋಜಾ ಸಮಯ

| ದಿನಾಂಕ | ಸಹರಿ | ಇಫ್ತಾರ್ |
|---|---|---|
| ಫೆ.25 | 5.26 | 6.36 |
| ಫೆ.26 | 5.26 | 6.36 |

## ಇಂದು 'ಜನರೊಂದಿಗೆ ಜನತಾದಳ' ಸಮಾವೇಶ

ಪ್ರಜಾವಾಣಿ ವಾರ್ತೆ

**ಹುಣಸೂರು:** 'ಜೆಡಿಎಸ್ ಪಕ್ಷವನ್ನು ತಳಹಂತದಲ್ಲಿ ಮತ್ತಷ್ಟು ಗಟ್ಟಿಗೊಳಿಸುವ ಉದ್ದೇಶದಿಂದ 25ರಂದು ನಗರದ ಮುನೇಶ್ವರ ಕಾವಲ್ ಮೈದಾನದಲ್ಲಿ 'ಜನರೊಂದಿಗೆ ಜನತಾದಳ' ಕಾರ್ಯಕ್ರಮ ಹಮ್ಮಿಕೊಂಡಿದ್ದು, ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಭಾಗವಹಿಸಲಿದ್ದಾರೆ' ಎಂದು ಪಕ್ಷದ ಮುಖಂಡ ಫಜಲುಲ್ಲಾ ಹೇಳಿದರು.

'ನಿಖಿಲ್ ಕುಮಾರಸ್ವಾಮಿ ಸಾರಥ್ಯದಲ್ಲಿ ರಾಜ್ಯದಾದ್ಯಂತ ಸಂಘಟನೆ ಮಿಂಚಿನಂತೆ ನಡೆದಿದ್ದು, ಕಾರ್ಯಕ್ರಮದಲ್ಲಿ ಕಾರ್ಯಕರ್ತರನ್ನು ಹುರುದುಂಬಿಸಿ ಪಕ್ಷವನ್ನು ಬೆಳೆಸಲು ಭರವಸೆಯ ಬೆಳಕಾಗಿದ್ದಾರೆ. ತಾತ ಎಚ್.ಡಿ.ದೇವೇಗೌಡ ಮತ್ತು ತಂದೆ ಎಚ್.ಡಿ.ಕುಮಾರಸ್ವಾಮಿ ಅವರು ಕಟ್ಟಿಬೆಳೆಸಿದ ಪಕ್ಷವನ್ನು ಮುನ್ನಡೆಸುವ ಪ್ರತಿಜ್ಞೆ ಸ್ವೀಕರಿಸಿರುವ ನಿಖಿಲ್ ಜಿಲ್ಲೆಯಾದ್ಯಂತ ಬೃಹತ್ ಕಾರ್ಯಕ್ರಮಗಳೊಂದಿಗೆ ಮತದಾರರ ಮನದಾಳದಲ್ಲಿ ಉಳಿಯುವ ಕೆಲಸ ಮಾಡಿದ್ದಾರೆ' ಎಂದು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡ ಹರವೆ ಶ್ರೀಧರ್, ಬಸವಲಿಂಗಯ್ಯ, ಅಸ್ವಾಳ್ ಕೆಂಪೇಗೌಡ ಹಾಜರಿದ್ದರು.

# ಮಿಮಿಕ್ರಿಯ ನಿಸ್ಸೀಮ ಬೀರೇಶ್

### 40 ಬಗೆಯ ಪ್ರಾಣಿಗಳ ಧ್ವನಿ ಅನುಕರಿಸುವ ಪ್ರತಿಭೆ; ನಾಟಕ ಅಭಿನಯದಲ್ಲೂ ಸೈ

● ಸಿ.ಎಸ್.ಸುರೇಶ್

**ನಾಪೋಕ್ಲು:** ಲಕ್ಷ್ಮಿ ವಿಚಾರ... ಲಕ್ಷ್ಮಿ ವಿಚಾರ.... ಧನಲಕ್ಷ್ಮಿ ವಿಚಾರ... ಗೌರವಯುತ ಮನುಷ್ಯರಲ್ಲಿ ಧನಲಕ್ಷ್ಮಿ ವಿಚಾರ... ಸುಳ್ಳಾದರೆ ಸುಳ್ಳೆನ್ನು.. ನಿಜವಾದರೆ ನಿಜವೆನ್ನು..ಬುಡುಬುಡಿಕೆ ರಾಮನಾಥ ನಮ್ಮೂರಿಗೆ ಬಾಳ ದೂರವಿಲ್ಲ.. ಕೊಡಗು ಜಿಲ್ಲೆಯ ಮಡಿಕೇರಿ ತಾಲೂಕು ..ನಾಪೋಕ್ಲು ನಾಡು.. ನಡೆಯುವವನು ನಿಂತು ಬಿಟ್ಟೆ ...ನಿಂತವನು ಕೂತುಬಿಟ್ಟೆ.. ಕೂತವನು ಮಲಗಿಬಿಟ್ಟೆ ಅರ್ಥವಾಯಿತಾ..

'ಮಮ್ಮಿ ನನ್ನನ್ನು ಸ್ಕೂಲಲ್ಲಿ ಕುಳ್ಳಿ ಕುಳ್ಳಿ ಅಂತ ಚುಡಾಯಿಸುತ್ತಾರೆ. ನೀನು ಎಲ್ಲಿ ಕುಳ್ಳಿ ಇದ್ದೀಯ.. ನೀನು ಇಷ್ಟು ಎತ್ತರವಾಗಿದ್ದಿ.. ಸ್ಟ್ರಾಂಗ್ ಕೂಡ. ಮಗಳನ್ನು ಮಾಡಿರಿ ಹೆಚ್ಚು ಸ್ಟ್ರಾಂಗ್, ಕ್ಲಿನಿಕ್ ಪ್ಲಸ್‌ನಿಂದ..

ಬುಡುಬುಡಿಕೆಯ ಪದಗಳನ್ನು, ಟಿ.ವಿ ಜಾಹೀರಾತುಗಳ ಸ್ಲೋಗನ್‌ಗಳನ್ನು ಸುಲಲಿತವಾಗಿ ನುಡಿಯುವ, ಈ ರೀತಿಯ ಮಾತುಗಳನ್ನು ತಡವರಿಸದೆ ನುಡಿಯುವ ಈ ವಿದ್ಯಾರ್ಥಿಯ ಹೆಸರು ಬೀರೇಶ್. ಧ್ವನಿ ಅನುಕರಣೆ ಮಾಡುವುದರಲ್ಲಿ ನಿಸ್ಸೀಮ. ಹಲವು ಮಿಮಿಕ್ರಿ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಬಹುಮಾನಗಳನ್ನು ಮುಡಿಗೇರಿಸಿಕೊಂಡಿದ್ದಾನೆ.

ಹಾವೇರಿ ಜಿಲ್ಲೆಯ ಈ ಬಾಲಕ ನಾಪೋಕ್ಲುವಿನ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯಲ್ಲಿ ಏಳನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾನೆ. ಕಳೆದ ವರ್ಷ ಜಿಲ್ಲೆಯ ಈ ಶಾಲೆಗೆ ದಾಖಲಾಗಿದ್ದು ಶಾಲಾ ಶಿಕ್ಷಣ ಇಲಾಖೆ ಆಯೋಜಿಸುವ ವಿವಿಧ ಸ್ಪರ್ಧೆಗಳಲ್ಲಿ ಪ್ರಶಸ್ತಿ ಗಳಿಸಿದ್ದಾನೆ. ಈತ ಸುಮಾರು 40 ವಿಧದ ಪ್ರಾಣಿಗಳ ಧ್ವನಿಯನ್ನು ಅನುಕರಣೆ ಮಾಡುತ್ತಾನೆ. ಕುದುರೆ ಕೆನೆಯುವುದು, ಮಗು ಅಳುವುದು, ಹಲ್ಲಿ ಲೊಚಗುಟ್ಟುವುದು, ಇಲಿ ಸದ್ದು ಮಾಡುವುದು, ನಾಯಿ ಬೊಗಳುವುದು, ಆಂಬುಲೆನ್ಸ್ ಸೈರನ್ ಹೀಗೆ.. ಹತ್ತು ಹಲವು ಧ್ವನಿಗಳನ್ನು ಸಹಜವಾಗಿ ಅನುಕರಣೆ ಮಾಡುತ್ತಾನೆ ಬೀರೇಶ್. ಈತನ ತಂದೆ ರಮೇಶ್, ತಾಯಿ ಮಂಜವ್ವ. ಈತನಿಗೆ ಹಾವೇರಿ ಜಿಲ್ಲೆಯ ಸವಣೂರಿನ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರನೇ ತರಗತಿಯಲ್ಲಿ ಓದುತ್ತಿರುವ ತಮ್ಮನೊಬ್ಬನಿದ್ದಾನೆ.

ಬೀರೇಶ ಹುಟ್ಟಿ ಬೆಳೆದದ್ದು ಹಾವೇರಿಯಲ್ಲಿ, ಗ್ರಾಮೀಣ ಪ್ರದೇಶದಲ್ಲಿ ಕುರಿ ಮೇಯಿಸುತ್ತ, ಪ್ರಾಣಿಗಳ ಒಡನಾಟದಿಂದ ಈ ಬಾಲಕನಿಗೆ ಎಲ್ಲ ಪ್ರಾಣಿಗಳ ಧ್ವನಿ ಅನುಕರಣೆ ಸಿದ್ಧಿಸಿದೆ. ಕೊಡಗಿಗೆ ಬಂದ ನಂತರ ಶಿಕ್ಷಕರು ಈತನ ಪ್ರತಿಭೆಯನ್ನು ಗುರುತಿಸಿ ಮಾರ್ಗದರ್ಶನ ಮಾಡಿದ್ದಾರೆ. ಕೇವಲ ಮಿಮಿಕ್ರಿ ಮಾತ್ರವಲ್ಲ, ನಾಟಕ, ಪ್ರಹಸನಗಳನ್ನು ಸ್ನೇಹಿತರೊಡಗೂಡಿ ಉತ್ತಮವಾಗಿ ಅಭಿನಯಿಸುತ್ತಿದ್ದಾನೆ. ಗ್ರಾಮ್ಯ ಭಾಷೆಯಲ್ಲಿ ಚೆನ್ನಾಗಿ ಪಳಗಿದ್ದಾನೆ. ಈತನ ಮಾತುಗಳಲ್ಲಿ ಹಳ್ಳಿಯ ಸೊಗಡು ಅಡಗಿದೆ. ಪ್ರಾಣಿ, ಪಕ್ಷಿಗಳ ಧ್ವನಿಯನ್ನು ಅನುಕರಣೆ ಮಾಡುವಲ್ಲಿ ಪ್ರತಿಭಾವಂತ ಎನ್ನುತ್ತಾರೆ ಅಂಬೇಡ್ಕರ್ ಶಾಲಾ ಶಿಕ್ಷಕ ಲಕ್ಷ್ಮಣ.

ಪ್ರಾಣಿ, ಪಕ್ಷಿಗಳ ಧ್ವನಿ ಅನುಕರಣೆ ಮಾಡುವಲ್ಲಿ ಶಿಕ್ಷಕರು ಮೊಬೈಲ್‌ನಲ್ಲಿ ವಿಡಿಯೊ ತೋರಿಸಿ ನೆರವಾದರು. ಅದನ್ನು ಅಭ್ಯಾಸ ಮಾಡಿದ್ದರಿಂದ ತಾಲ್ಲೂಕು ಮಟ್ಟ, ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಬಹುಮಾನ ಗೆಲ್ಲಲು ಸಾಧ್ಯವಾಯಿತು ಎನ್ನುತ್ತಾನೆ ಬೀರೇಶ್.

ಹಾವೇರಿಯಿಂದ ಹಾಸನಕ್ಕೆ ಬರುವಾಗ ರೈಲಿನಲ್ಲಿ ಚುಕುಬುಕ್ಕು ಧ್ವನಿ ಆಲಿಸುತ್ತಿದ್ದೆ. ರೈಲಿನ ಎಂಜಿನ್ ಶಬ್ದವನ್ನು ಅನುಕರಣೆ ಮಾಡುವುದು ಕರಗತವಾಯಿತು. ಹಾಗೆಯೇ ಹಳ್ಳಿಗಳಲ್ಲಿ ಪ್ರಾಣಿಗಳ ಧ್ವನಿಗಳನ್ನು ಕರಗತ ಮಾಡಿಕೊಂಡಿದ್ದೇನೆ ಎನ್ನುವ ಬೀರೇಶ್ ಶಾಲೆಯ ಪ್ರತಿಭಾವಂತ ವಿದ್ಯಾರ್ಥಿ. ಈತನ ಅನುಕರಣ ಶೈಲಿಗೆ ಹಲವರು ಮನಸೋತಿದ್ದಾರೆ. ಈತನ ಗ್ರಾಮೀಣ ಭಾಷೆಯ ನುಡಿಗಳು ಜಿಲ್ಲೆಯಲ್ಲಿ ಹಲವರ ಮೆಚ್ಚುಗೆ ಗಳಿಸಿವೆ.

ಜಿಲ್ಲಾಮಟ್ಟದ ಪ್ರತಿಭಾ ಕಾರಂಜಿಕಲೋತ್ಸವದ ಮಿಮಿಕ್ರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಡಾ.ಬಿ.ಆರ್. ಅಂಬೇಡ್ಕರ್ ವಸತಿ ಶಾಲೆಯ ವಿದ್ಯಾರ್ಥಿ ಬೀರೇಶ್‌ಗೆ ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳು ಪ್ರಶಸ್ತಿಪತ್ರ ವಿತರಿಸಿದ ಸಂದರ್ಭ

**ದೇಸಿ ಸಾಧಕರು**

> **ವೀರೇಶ್ ಏಳನೇ ತರಗತಿಯ ಪ್ರತಿಭಾನ್ವಿತ ವಿದ್ಯಾರ್ಥಿ. ಯಾವುದೇ ಅನುಕರಣೆಯನ್ನು ಅಳುಕಿಲ್ಲದೆ ಧೈರ್ಯದಿಂದ ಮಾಡಿ ತೋರಿಸುತ್ತಾನೆ. ಈತನ ಪ್ರತಿಭೆ ಹೆಮ್ಮೆಎನಿಸಿದೆ**
>
> **ಕೆ.ಡಿ ನೀತಾ, ಪ್ರಾಂಶುಪಾಲರು,**
> ಅಂಬೇಡ್ಕರ್ ವಸತಿ ಶಾಲೆ

## ಸುದ್ದಿ 2 ನಿಮಿಷ

### ಹಾಲು ಪ್ರೋತ್ಸಾಹಧನ ₹7ಕ್ಕೆ ಹೆಚ್ಚಳ: ಕೆಎಂಎಫ್ ಪ್ರಸ್ತಾವ

**ಬೆಂಗಳೂರು:** ಹಾಲು ಉತ್ಪಾದಕರಿಗೆ ನೀಡುತ್ತಿರುವ ಪ್ರೋತ್ಸಾಹಧನವನ್ನು ಪ್ರತಿ ಲೀಟರ್‌ಗೆ ₹5 ರಿಂದ ₹7ಕ್ಕೆ ಹೆಚ್ಚಿಸಬೇಕು ಎಂದು ಕರ್ನಾಟಕ ಹಾಲು ಮಹಾಮಂಡಲ (ಕೆಎಂಎಫ್) ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ.

ಬೆಳಗಾವಿಯಲ್ಲಿ ಡಿಸೆಂಬರ್‌ನಲ್ಲಿ ನಡೆದ ಅಧಿವೇಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರೋತ್ಸಾಹಧನ ಏರಿಸುವುದಾಗಿ ಘೋಷಿಸಿದ್ದರೂ ಜಾರಿಯಾಗಿಲ್ಲ. ಬಜೆಟ್‌ನಲ್ಲಿ ಪ್ರಕಟಿಸಿ ಜಾರಿಗೊಳಿಸುವ ನಿರೀಕ್ಷೆ ಇದೆ.

ರಾಜ್ಯದಲ್ಲಿ ಹಾಲಿನ ಉತ್ಪಾದನೆ ಪ್ರಮಾಣ ಗಣನೀಯವಾಗಿ ಏರಿಕೆಯಾಗಿದ್ದು, ಪ್ರತಿನಿತ್ಯ 1 ಕೋಟಿ ಲೀಟರ್ ಹಾಲನ್ನು ಕೆಎಂಎಫ್ ಸಂಗ್ರಹ ಮಾಡುತ್ತಿದೆ. ಪ್ರೋತ್ಸಾಹಧನ ಏರಿಕೆಯಿಂದ ಹಾಲಿನ ಉತ್ಪಾದನೆ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸುವ ಗುರಿಯನ್ನು ಮಹಾಮಂಡಳಿ ಇಟ್ಟುಕೊಂಡಿದೆ.

**₹730 ಕೋಟಿ ನೆರವು:** 'ನಮ್ಮ ಸರ್ಕಾರ ಪ್ರತಿ ಲೀಟರ್ ಹಾಲಿಗೆ ₹3 ಏರಿಕೆ ಮಾಡಿತ್ತು. ಸಹಾಯಧನ ಮೊತ್ತವನ್ನು ₹400 ಹೆಚ್ಚಳ ಮಾಡಿತ್ತು. ಈ ಮೊತ್ತವನ್ನು ನೇರವಾಗಿ ರೈತರ ಖಾತೆಗೆ ವರ್ಗ ಮಾಡುತ್ತಿದ್ದೇವೆ. ಮೇವಿನ ದರ, ಪಶು ಆಹಾರ ಸಹಿತ ಇತರೆ ಉತ್ಪನ್ನಗಳ ದರ ಏರಿಕೆ ಕಾರಣದಿಂದ ಪ್ರೋತ್ಸಾಹಧನ ಹೆಚ್ಚಿಸುವ ಬೇಡಿಕೆ ಇದೆ. ಚುನಾವಣೆ ಪ್ರಣಾಳಿಕೆಯಲ್ಲಿ ಘೋಷಿಸಿದಂತೆ ಪ್ರೋತ್ಸಾಹಧನ ₹7ಗೆ ಹೆಚ್ಚಳ ಮಾಡುತ್ತೇವೆ' ಎಂದು ಸಿದ್ದರಾಮಯ್ಯ ಹೇಳಿದ್ದರು.

ಕರ್ನಾಟಕದಲ್ಲಿ ಸದ್ಯ 16 ಹಾಲು ಒಕ್ಕೂಟಗಳ ವ್ಯಾಪ್ತಿಯ 9 ಲಕ್ಷ ರೈತರು ನಿತ್ಯ ಹಾಲು ಪ್ರೋತ್ಸಾಹಧನ ಪಡೆಯುತ್ತಿದ್ದಾರೆ. ಪ್ರತಿ ವರ್ಷ ₹1,900 ಕೋಟಿಯನ್ನು ರೈತರ ನೇರ ಖಾತೆಗೆ ವರ್ಗಾಯಿಸಲಾಗುತ್ತಿದೆ. ಪ್ರತಿ ಲೀಟರ್‌ಗೆ ₹2 ಏರಿಕೆಯಾದರೆ ವರ್ಷಕ್ಕೆ ₹730 ಕೋಟಿಯಷ್ಟು ಹೆಚ್ಚಿನ ಮೊತ್ತವನ್ನು ಬೊಕ್ಕಸದಿಂದ ಭರಿಸಬೇಕಾಗುತ್ತದೆ. ರೈತರಿಗೆ ಸದ್ಯ ಪ್ರತಿ ಲೀಟರ್‌ಗೆ ₹38 ವರೆಗೂ ದರ ಸಿಗುತ್ತಿದೆ. 'ಬಜೆಟ್ ಪೂರ್ವಭಾವಿ ಸಭೆಯಲ್ಲಿ ಪ್ರೋತ್ಸಾಹಧನ ಏರಿಕೆ ಪ್ರಸ್ತಾವವನ್ನು ಸಲ್ಲಿಸಲಾಗಿದೆ. ಇದಕ್ಕೆ ಪೂರಕವಾಗಿ ಸ್ಪಂದನೆಯೂ ಸಿಕ್ಕಿದೆ' ಎಂದು ಕೆಎಂಎಫ್ ವ್ಯವಸ್ಥಾಪಕ ನಿರ್ದೇಶಕ ಬಿ.ಶಿವಸ್ವಾಮಿ ತಿಳಿಸಿದರು.

### ಜಿ.ಎಸ್.ಎಸ್ ನೆನಪು ಕಾರ್ಯಕ್ರಮ

**ಕುಶಾಲನಗರ:** ಮೂಢನಂಬಿಕೆಯ ವಿರುದ್ಧ ಜಿಎಸ್ಎಸ್ ಅವರ ಹೋರಾಟ ನಿರಂತರವಾಗಿತ್ತು ಎಂದು ಕನ್ನಡ ಸಾಹಿತ್ಯ ಪರಿಷತ್ತು ಹೆಬ್ಬಾಲೆ ಹೋಬಳಿ ಘಟಕದ ಅಧ್ಯಕ್ಷ ಮಣಜೂರುಮೂರ್ತಿ ಸ್ಮರಿಸಿದರು.

ಸಮೀಪದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ನೆನಪು ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಹೆಬ್ಬಾಲೆ ಸಂಯುಕ್ತ ಪದವ ಪೂರ್ವ ಕಾಲೇಜಿನ ಕನ್ನಡ ಪ್ರಾಧ್ಯಾಪಕ ಮೆ.ನಾ.ವೆಂಕಟನಾಯಕ್ ಮಾತನಾಡಿ, ಸಾಹಿತ್ಯ ಲೋಕಕ್ಕೆ ರಾಷ್ಟ್ರಕವಿ ಜಿ.ಎಸ್.ಶಿವರುದ್ರಪ್ಪ ಅವರ ಕೊಡುಗೆ ಅಪಾರವಾದುದು. ಜಾತಿ, ಮತಗಳನ್ನು ಮೀರಿ ತಮ್ಮ ವೈಚಾರಿಕ ಚಿಂತನೆಗಳ ಮೂಲಕ ಕನ್ನಡ ಸಾಹಿತ್ಯ ಕ್ಷೇತ್ರವನ್ನು ಸಮೃದ್ಧಗೊಳಿಸಿದರು ಎಂದು ಬಣ್ಣಿಸಿದರು.

ಶಾಲಾ ಮುಖ್ಯ ಶಿಕ್ಷಕ ಎಚ್.ಎಂ.ವೆಂಕಟೇಶ್ ಅಧ್ಯಕ್ಷತೆ ವಹಿಸಿದ್ದರು. ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಪ್ರದೀಪ್, ಕಾರ್ಪೋರೇಷನ್ ಬ್ಯಾಂಕ್ ನಿವೃತ್ತ ವ್ಯವಸ್ಥಾಪಕ ಸುಬ್ರಮಣಿ ಹೆಬ್ಬಾಲೆ, ನಿವೃತ್ತ ಶಿಕ್ಷಕಿ ಸಿ.ಎಸ್. ಜಾನಕಿ, ಶಾಲಾ ಸಹ ಶಿಕ್ಷಕರಾದ ಬಬಿತ, ರಮ್ಯ, ಶಿವಾನಂದ, ದೈಹಿಕ ಶಿಕ್ಷಣ ಶಿಕ್ಷಕಿ ವಂಜಮ್ಮ ಪಾಲ್ಗೊಂಡಿದ್ದರು. ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಹಾಗೂ ಗೀತಾ ಗಾಯನ ಕಾರ್ಯಕ್ರಮ ನಡೆಯಿತು.

## ಗುಂಡು ತಗುಲಿ ವ್ಯಕ್ತಿಗೆ ಗಾಯ

ಪ್ರಜಾವಾಣಿ ವಾರ್ತೆ

**ಸಿದ್ದಾಪುರ:** ಮನೆಯ ಹಿಂಭಾಗದಲ್ಲಿ ಕೆಲಸ ಮಾಡುವ ವೇಳೆ ಗುಂಡು ತಗುಲಿ ವ್ಯಕ್ತಿಯೊಬ್ಬರಿಗೆ ಗಂಭೀರ ಗಾಯವಾಗಿರುವ ಘಟನೆ ಅಮ್ಮತ್ತಿ ಸಮೀಪದ ಆನಂದಪುರದಲ್ಲಿ ಮಂಗಳವಾರ ನಡೆದಿದೆ.

ಆನಂದಪುರ ನಿವಾಸಿ ಅನೆಸ್ಟ ಡಿ ಕುನ್ಹ (63) ಎಂಬವರು ಮನೆಯ ಹಿಂಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಈ ವೇಳೆ ಕಿಡಿಗೇಡಿ ಹಾರಿಸಿದ ಗುಂಡು ಅನೆಸ್ಟ ಅವರ ಎದೆಗೆ ತಗುಲಿದೆ. ಅವರನ್ನು ಕೂಡಲೇ ಅಮ್ಮತ್ತಿ ಆಸ್ಪತ್ರೆಯಲ್ಲಿ ದಾಖಲಿಸಲಾಯಿತು. ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಅವರನ್ನು ಮಂಗಳೂರಿಗೆ ಕರೆದೊಯ್ಯಲಾಗಿದೆ.

ಸಿದ್ದಾಪುರ ಠಾಣಾಧಿಕಾರಿ ಮಂಜುನಾಥ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಪ್ರಕರಣ ದಾಖಲಿಸಿದ್ದಾರೆ.

ಆರೋಪಿಗಳ ಬಂಧನಕ್ಕೆ ಶೋಧ ನಡೆಸುತ್ತಿದ್ದಾರೆ.

ಎಲ್ಲಾ ಶೈಕ್ಷಣಿಕ ಸಂಸ್ಥೆಗಳಿಗೆ ಸೂಕ್ತ ಮಾಧ್ಯಮ
ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ
ಜಾಹೀರಾತು ಪ್ರಕಟಿಸಲು ಸಂಪರ್ಕಿಸಿ
ಮಂಗಳೂರು – ಉದಯ್ ಕುಮಾರ್ – 9945337587
ಹರ್ಷಿತ್ – 9731924900
ಉಡುಪಿ – ಹರ್ಷಿತ್ – 9731924900
ಮಡಿಕೇರಿ – ಉದಯ್ ಕುಮಾರ್ – 9945337587

ಸೋಮವಾರಪೇಟೆ ಸಮೀಪದ ಬೇಳೂರು ಮಂಡಲದ ವತಿಯಿಂದ ಏರ್ಪಡಿಸಿದ್ದ ಹಿಂದೂ ಸಂಗಮ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ತೋಂಟದಾರ್ಯ ಬಸವಾಪಟ್ಟಣ ಮಠದ ಸ್ವತಂತ್ರ ಬಸವಲಿಂಗ ಸ್ವಾಮೀಜಿ ಉದ್ಘಾಟಿಸಿದರು

ಸೋಮವಾರಪೇಟೆ ಸಮೀಪದ ಬೇಳೂರು ಮಂಡಲದ ವತಿಯಿಂದ ಏರ್ಪಡಿಸಿದ್ದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಸಭಿಕರು

### ಬೇಳೂರು ಮಂಡಲದಿಂದ ಆಯೋಜಿಸಿದ್ದ ಹಿಂದೂ ಸಂಗಮ ಕಾರ್ಯಕ್ರಮ

# 'ಭಾರತ ಮಾತೃತ್ವ, ಭ್ರಾತೃತ್ವದ ದೇಶ'

ಪ್ರಜಾವಾಣಿ ವಾರ್ತೆ

**ಸೋಮವಾರಪೇಟೆ:** ವಿಶ್ವದ ಇತರೆ ರಾಷ್ಟ್ರಗಳು ವ್ಯವಹಾರಿಕ ದೇಶಗಳಾದರೆ ಭಾರತ ಮಾತೃತ್ವ ಹಾಗೂ ಭ್ರಾತೃತ್ವದ ದೇಶವಾಗಿದೆ ಎಂದು ಪುತ್ತೂರು ವಿವೇಕಾನಂದ ಪದವಿಪೂರ್ವ ಕಾಲೇಜು ಆಡಳಿತ ಮಂಡಳಿ ಅಧ್ಯಕ್ಷ ಪುತ್ತೂರು ರವೀಂದ್ರ ಅಭಿಪ್ರಾಯಿಸಿದರು.

ಸಮೀಪದ ಬೇಳೂರು ಮಂಡಲದ ವತಿಯಿಂದ ಸೋಮವಾರ ನಡೆದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ಹಿಂದುತ್ವದ ಹರಿಕಾರ, ಪ್ರತಿಪಾದಕ ಸ್ವಾಮಿ ವಿವೇಕಾನಂದರು ಅಂದು ಚಿಕಾಗೋ ನಗರದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದಲ್ಲಿ ಭಾರತೀಯ ಸಂಸ್ಕೃತಿಯ ಬಗ್ಗೆ ಮಾತನಾಡಿ ಇಡೀ ವಿಶ್ವವೇ ಭಾರತದತ್ತ ತಿರುಗಿನೋಡುವಂತೆ ಮಾಡಿದ್ದರು. ಸನಾತನ ಹಿಂದೂ ಧರ್ಮ ಉಳಿದರೆ ಭಾರತ ಉಳಿಯುತ್ತದೆ ಎಂಬುದನ್ನು ಪ್ರತಿಯೊಬ್ಬರು ಅರಿತುಕೊಳ್ಳಬೇಕು ಎಂದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ತೋಂಟದಾರ್ಯ ಬಸವಾಪಟ್ಟಣ ಮಠದ ಸ್ವತಂತ್ರ ಬಸವಲಿಂಗ ಸ್ವಾಮೀಜಿ ಮಾತನಾಡಿ, ಈ ರಾಷ್ಟ್ರದಲ್ಲಿ ಸನಾತನ ಧರ್ಮ, ಹಿಂದುತ್ವದ ಬಗ್ಗೆ ಕಾಳಜಿ ವಹಿಸಿ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸುವ ಕಾರ್ಯ ಮಾಡಿರುವ ಏಕೈಕ ಸಂಘಟನೆ ಅದು ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಇದು ಆರಂಭಗೊಂಡು ನೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ರಾಷ್ಟ್ರದೆಲ್ಲೆಡೆ ಹಿಂದೂ ಸಂಗಮ ಕಾರ್ಯಕ್ರಮ ಆಯೋಜಿಸುವ ಮೂಲಕ ಹಿಂದೂಗಳನ್ನು ಒಂದೆಡೆ ಸೇರಿಸುವ ಕಾರ್ಯನಡೆಯುತ್ತಿದೆ ಎಂದರು.

ನಮ್ಮ ದೇಶದ ಸಂಸ್ಕೃತಿ, ಆಚಾರ, ವಿಚಾರ ಉಳಿಯಬೇಕಾದರೆ ಮನೆಯಲ್ಲಿ ಮಹಿಳೆಯರು ಮೊದಲು ಆಚಾರವಂತರಾಗಬೇಕು. ಅದಕ್ಕಾಗಿಯೇ ರಾಷ್ಟ್ರೀಯ ಸ್ವಯಂ ಸೇವಕ ಸಂಘ ಪಂಚ ಪರಿವರ್ತನ ಎಂಬ ಬದಲಾವಣೆಯ ಉದ್ದೇಶಕ್ಕೆ ಕೈಹಾಕಿದೆ. ಆ ಮೂಲಕ ನಮ್ಮಲ್ಲಿ, ಸಮಾಜದಲ್ಲಿ ಬದಲಾವಣೆ ಆದರೆ, ದೇಶದಲ್ಲಿ ಬದಲಾವಣೆ ಆಗುತ್ತದೆ. ಹಿಂದೂಗಳು ಇಂದು ಸಂಘಟಿತರಾಗಬೇಕಾಗಿದೆ. ಇಲ್ಲವಾದಲ್ಲಿ ಮುಂದೆ ಕಷ್ಟದ ಪರಿಸ್ಥಿತಿ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಕಾಫಿ ಬೆಳೆಗಾರರಾದ ಗುರುಮಲ್ಲೇಶ ಅಧ್ಯಕ್ಷತೆ ವಹಿಸಿದ್ದರು, ಕಾರ್ಯಕ್ರಮ ಆಯೋಜನ ಸಮಿತಿ ತಾಲ್ಲೂಕು ಅಧ್ಯಕ್ಷ ಸನತ್, ಗೌರವಾಧ್ಯಕ್ಷ ಸೀತಾರಾಮ್, ಮಂಡಲ ಅಧ್ಯಕ್ಷ ಚಂದ್ರು ಹುಲ್ಲೂರಿಕೊಪ್ಪ, ಆಟೊ ಚಾಲಕಿ ಪ್ರಮೀಳಾ ವೇದಿಕೆಯಲ್ಲಿದ್ದರು. ಕಾರ್ಯಕ್ರಮಕ್ಕೂ ಮುನ್ನ ಕುಸುಬೂರು ದೇವಾಲಯದ ಬಳಿಯಿಂದ ಬೃಹತ್ ಶೋಭಾಯಾತ್ರೆ ನಡೆಯಿತು.

## 'ಮಾರ್ಚ್ 6ರ ಪ್ರತಿಭಟನೆಯಲ್ಲಿ ಕೊಡಗಿನ ಗುತ್ತಿಗೆದಾರರು ಭಾಗಿ'

**ಮಡಿಕೇರಿ:** ರಾಜ್ಯ ಸರ್ಕಾರವು ಕಳೆದ 3 ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ ₹ 37 ಸಾವಿರ ಕೋಟಿ ಬಿಲ್ ಹಣ ನೀಡಬೇಕು ಎಂದು ಒತ್ತಾಯಿಸಿ ಗುತ್ತಿಗೆದಾರರ ಸಂಘವು ಮಾರ್ಚ್ 6ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಸಲಿರುವ ಪ್ರತಿಭಟನೆಯಲ್ಲಿ ಕೊಡಗಿನಿಂದಲೂ ಗುತ್ತಿಗೆದಾರರು ಭಾಗವಹಿಸಲಿದ್ದಾರೆ ಎಂದು ಸಂಘದ ಕಾರ್ಯಾಧ್ಯಕ್ಷ ವಿ.ಎ.ಲಾರೆನ್ಸ್ ಮಂಗಳವಾರ ಹೇಳಿದರು.

ಕೊಡಗಿನ ಗುತ್ತಿಗೆದಾರರಿಗೆ ₹195.26 ಕೋಟಿ ಹಣ ಪಾವತಿಗೆ ಬಾಕಿಯಿದೆ. ಸರ್ಕಾರ ಕೂಡಲೇ ಈ ಹಣ ಬಿಡುಗಡೆ ಮಾಡಬೇಕು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

ಲೋಕೋಪಯೋಗಿ ಇಲಾಖೆಯಲ್ಲಿ 7 ಎಂಜಿನಿಯರ್‌ಗಳಿದ್ದು, ಗುಣಮಟ್ಟದ ಕಾಮಗಾರಿ ನಡೆಯಬೇಕಾದರೆ ಹೆಚ್ಚಿನ ಎಂಜಿನಿಯರ್‌ಗಳನ್ನು ನೇಮಿಸುವ ಅಗತ್ಯವಿದೆ ಎಂದು ಹೇಳಿದರು.

ಜಿಲ್ಲಾ ಲೋಕೋಪಯೋಗಿ ಗುತ್ತಿಗೆದಾರರ ಸಂಘದ ಅಧ್ಯಕ್ಷ ರವಿ ಚಂಗಪ್ಪ, ಉಪಾಧ್ಯಕ್ಷ ರಾಜೀವ್ ಲೋಚನ, ಕಾರ್ಯದರ್ಶಿ ಅರುಣ್ ಕುಮಾರ್, ಸಂಘಟನಾ ಕಾರ್ಯದರ್ಶಿ ಕೆ.ಬಾಬು, ಖಜಾಂಚಿ ರವೀಂದ್ರ ರೈ ಭಾಗವಹಿಸಿದ್ದರು.

बैंक ऑफ़ बड़ौदा
Bank of Baroda
ಬ್ಯಾಂಕ್ ಆಫ್ ಬರೋಡ, ಮಡಿಕೇರಿ ಶಾಖೆ,
ಪಿ. ಬಿ. ನಂ. 27, ಮುಖ್ಯ ರಸ್ತೆ, ಮಡಿಕೇರಿ, ಕೆಎಸ್ಆರ್‌ಟಿಸಿ ಬಸ್ ಸ್ಟ್ಯಾಂಡ್ ಹತ್ತಿರ,
ಕೊಡಗು ಜಿಲ್ಲೆ, ಮಡಿಕೇರಿ–571201. ಮೊಬೈಲ್: 90477 48844

ಹಣಕಾಸಿನ ಆಸ್ತಿಗಳ ಪ್ರತಿಭೂತಿಕರಣ ಮತ್ತು ಪುನರ್‌ನಿರ್ಮಾಣ ಹಾಗೂ ಪ್ರತಿಭೂತಿ ಹಿತಾಸಕ್ತಿ ಕಾಯಿದೆ 2002 ಹಾಗೂ ಪ್ರತಿಭೂತಿ ಹಿತಾಸಕ್ತಿ (ಜಾರಿಗೊಳಿಸುವಿಕೆ) ನಿಯಮಗಳು 2002ರ ನಿಯಮ 6(2) ಹಾಗೂ 8(6)ರಂತೆ ಇ–ಹರಾಜಿನ ಮೂಲಕ ಸ್ಥಿರಾಸ್ತಿಗಳ ಮಾರಾಟ ಪ್ರಕಟಣೆ.

ಇ–ಹರಾಜು ಮಾರಾಟ ಪ್ರಕಟಣೆ

ಅಧಿಕೃತ ಅಧಿಕಾರಿಯವರು ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ಧಿಷ್ಟವಾಗಿ ಸಾಲಗಾರರು, ಅಡಮಾನದಾರರು ಮತ್ತು ಜಾಮೀನುದಾರರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ, **ಬ್ಯಾಂಕ್ ಆಫ್ ಬರೋಡಕ್ಕೆ** ಅಡಮಾನಗೊಳಿಸಿದ ಈ ಕೆಳಗೆ ನಮೂದಿಸಿದ ಸ್ಥಿರಾಸ್ತಿಗಳನ್ನು ನಿಯೋಜಿತ ಅಧಿಕಾರಿಯವರು ಸ್ವಾಧೀನ ಪಡಿಸಿಕೊಂಡಿರುತ್ತಾರೆ ಹಾಗೂ ಈ ಕೆಳಗಿನ ವಿವರ ರೀತ್ಯಾ ಮುಂದಿನ ಬಾಕಿ ಮೊತ್ತ ಹಾಗೂ ಮುಂದುವರೆದ ಬಡ್ಡಿ, ಖರ್ಚು ವೆಚ್ಚಗಳು, ಇತ್ಯಾದಿಯ ಬಾಕಿ ವಸೂಲಾತಿಗೆ ಇ–ಹರಾಜು ಮೂಲಕ ಈ ಕೆಳಗೆ ತಿಳಿಸಿದ ಸ್ಥಿರಾಸ್ತಿಗಳನ್ನು **"ಎಲ್ಲಿ ಹೇಗಿದೆಯೋ ಹಾಗೆ ಮತ್ತು ಎಲ್ಲಿ ಏನಿದೆಯೋ ಅದೇ ರೂಪದಲ್ಲಿ"** ಸ್ಥಿರಾಸ್ತಿಯನ್ನು ಮಾರಾಟ ಮಾಡಲಾಗುವುದು. ಸಾಲಗಾರರು/ ಅಡಮಾನದಾರರು/ ಜಾಮೀನುದಾರರು / ಭದ್ರತಾ ಆಸ್ತಿ/ ಬಾಕಿ ಮೊತ್ತ/ ಮೀಸಲು ಬೆಲೆ/ ಇ–ಹರಾಜು ದಿನಾಂಕ ಮತ್ತು ಸಮಯ/ ಇಎಮ್‌ಡಿ ಮತ್ತು ಬಿಡ್ಡ್ ಏರಿಕೆ ಮೊತ್ತ ಇವುಗಳ ವಿವರಗಳನ್ನು ಕೆಳಗೆ ತಿಳಿಸಲಾಗಿದೆ.

1. **ಸಾಲಗಾರರು ಹೆಸರು ಮತ್ತು ವಿಳಾಸ: ಶ್ರೀ ತೀರ್ಥ ಕುಮಾರ್**, ರಾಜು ರವರ ಮಗ, ಚಾಮುಂಡೇಶ್ವರಿ ನಗರ, ಮಡಿಕೇರಿ ಪಟ್ಟಣ, ಮಡಿಕೇರಿ, ಕೊಡಗು, ಕರ್ನಾಟಕ –571201. **ಇನ್ನೊಂದು ವಿಳಾಸ: ಶ್ರೀ ತೀರ್ಥ ಕುಮಾರ್**, ರಾಜು ರವರ ಮಗ, ಸೈಟ್ ಸಂಖ್ಯೆ 145, ಸರ್ವೆ ನಂ: 36, 37, 38, 39/2 & 39/3, ದೊಡ್ಡಹೊನ್ನೂರು ಗ್ರಾಮ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ, ಕರ್ನಾಟಕ–571107. **ಶ್ರೀಮತಿ ದಿವ್ಯಾ,** ಮಣಿಕಂಠ ರವರ ಪತ್ನಿ, 16/22, ಮಂಗಳಾದೇವಿ ನಗರ, ಮಡಿಕೇರಿ, ಕೊಡಗು, ಕರ್ನಾಟಕ– 571201. **ಇನ್ನೊಂದು ವಿಳಾಸ: ಶ್ರೀಮತಿ ದಿವ್ಯಾ,** ಮಣಿಕಂಠರವರ ಪತ್ನಿ, ಸೈಟ್ ಸಂಖ್ಯೆ 145, ಸರ್ವೆ ನಂ: 36, 37, 38, 39/2 & 39/3, ದೊಡ್ಡಹೊನ್ನೂರು ಗ್ರಾಮ, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ, ಕರ್ನಾಟಕ –571107.
**ಭದ್ರತಾ ಸ್ಥಿರಾಸ್ತಿಯ ವಿವರಗಳು:** ಕರ್ನಾಟಕ –571107, ಬೆಟ್ಟದ ಪುರ ಜಿಲ್ಲಾ ನೋಂದಾವಣಿ ಮತ್ತು ಬೆಟ್ಟದ ಪುರ ಉಪ ಜಿಲ್ಲಾ ನೋಂದಾವಣಿ ಒಳಪಡುವ ಮೈಸೂರು ಜಿಲ್ಲೆ, ಪಿರಿಯಪಟ್ಟಣ ತಾಲೂಕು, ಬೈಲುಕುಪ್ಪೆ ಗ್ರಾಮ ಪಂಚಾಯತ್, ದೊಡ್ಡಹೊನ್ನೂರು ಗ್ರಾಮ, ಸರ್ವೆ ನಂ. 36, 37, 38, 39/2 & 39/3 ಮತ್ತು ಸೈಟ್ ನಂ.155/145, ಆಸ್ತಿ ಸಂಖ್ಯೆ: 152200602108520379 ರಲ್ಲಿರುವ ಆಸ್ತಿ. **108 ಚದರ ಮೀಟರ್ ವಿಸ್ತೀರ್ಣದ ಜಾಗ (ಮತ್ತು ಕಟ್ಟಡ ಇನ್ನಾವುದೊ ಇದ್ದರೆ) ಸೇರಿ ಸರ್ವಾಧಿ ಸ್ಥಿರಾಸ್ತಿ. ಗಡಿಗಳು: ಉತ್ತರ:** ಸೈಟ್ ನಂ. 146, **ದಕ್ಷಿಣ:** ಸೈಟ್ ನಂ. 144, **ಪೂರ್ವ:** ಸೈಟ್ ನಂ. 110, **ಪಶ್ಚಿಮ:** ರಸ್ತೆ. **ಸ್ವಾಧೀನದ ಸ್ಥಿತಿ (ರಚನಾತ್ಮಕ/ಭೌತಿಕ): ಭೌತಿಕ**

| ಬಾಕಿಯಿರುವ ಮೊತ್ತ (ರೂ.ಗಳಲ್ಲಿ) ದಿನಾಂಕ 22.02.2026 ರ ವರೆಗೆ | ಮೀಸಲು ಬೆಲೆ | ಇಎಂಡಿ 10% |
|---|---|---|
| ರೂ. 36,19,413.04 ಜೊತೆಗೆ ಮುಂದುವರೆದ ಬಡ್ಡಿ ಮತ್ತು ಇತರ ಖರ್ಚು, ವೆಚ್ಚಗಳು, ಇತ್ಯಾದಿ | ರೂ. 35,00,000.00 | ರೂ. 3,50,000.00 |

2. **ಸಾಲಗಾರರು ಹೆಸರು ಮತ್ತು ವಿಳಾಸ: ಶ್ರೀ ಮಧು ಟಿ ಕೆ,** ಕುಮಾರ್ ಟಿ ಕೆ ರವರ ಮಗ, ಕೃಷಿ ಫಾರ್ಮ್ ಹತ್ತಿರ, ಬೇತು ಗ್ರಾಮ, ನಾಪೋಕ್ಲು, ಮಡಿಕೇರಿ ತಾಲೂಕು, ಕೊಡಗು, ಕರ್ನಾಟಕ – 571201, **ಇನ್ನೊಂದು ವಿಳಾಸ: ಶ್ರೀ ಮಧು ಟಿ ಕೆ,** ಸೈಟ್ ನಂ 155/4, ದೊಡ್ಡಹೊನ್ನೂರು ಗ್ರಾಮ, ಬೈಲಕುಪ್ಪೆ ಪಂಚಾಯತ್, ಪಿರಿಯಾಪಟ್ಟಣ ತಾಲೂಕು, ಮೈಸೂರು ಜಿಲ್ಲೆ, ಕರ್ನಾಟಕ–571107.
**ಭದ್ರತಾ ಸ್ಥಿರಾಸ್ತಿಯ ವಿವರಗಳು:** ಕರ್ನಾಟಕ– 571104, ಮೈಸೂರು ಜಿಲ್ಲೆ, ಪಿರಿಯಾಪಟ್ಟಣ ತಾಲೂಕು, ದೊಡ್ಡಹೊನ್ನೂರು ಗ್ರಾಮ, **ಸರ್ವೆ ನಂ:** 36, 37, 38, 39/2, 39/3, **ಆಸ್ತಿ ನಂ: 152200602108520309,** ಸೈಟ್ ನಂ: 155/4 ರಲ್ಲಿರುವ 199.44 ಚದರ ಮೀಟರ್ ವಿಸ್ತೀರ್ಣದ ಜಾಗದ ಆಸ್ತಿ ಮತ್ತು ಭಾಗಶಃ ನಿರ್ಮಿಸಿದ ವಸತಿ ಕಟ್ಟಡ ಸೇರಿ ಸರ್ವಾಧಿ ಸ್ಥಿರಾಸ್ತಿ. **ಗಡಿಗಳು: ಉತ್ತರಕ್ಕೆ:** ಸೈಟ್ ನಂ. 3, **ದಕ್ಷಿಣಕ್ಕೆ:** ಸೈಟ್ ನಂ. 5, **ಪೂರ್ವಕ್ಕೆ:** ರಸ್ತೆ, **ಪಶ್ಚಿಮಕ್ಕೆ:** ಸೈಟ್ ನಂ. 17 ಮತ್ತು 18.
**ಸ್ವಾಧೀನದ ಸ್ಥಿತಿ (ರಚನಾತ್ಮಕ/ಭೌತಿಕ): ಭೌತಿಕ**

| ಬಾಕಿಯಿರುವ ಮೊತ್ತ (ರೂ.ಗಳಲ್ಲಿ) ದಿನಾಂಕ 22.02.2026 ರ ವರೆಗೆ | ಮೀಸಲು ಬೆಲೆ | ಇಎಂಡಿ 10% |
|---|---|---|
| ರೂ. 28,68,204.06 ಜೊತೆಗೆ ಮುಂದುವರೆದ ಬಡ್ಡಿ ಮತ್ತು ಇತರ ಖರ್ಚು, ವೆಚ್ಚಗಳು, ಇತ್ಯಾದಿ | ರೂ. 25,00,000.00 | ರೂ. 2,50,000.00 |

ಇ–ಹರಾಜಿನ ದಿನಾಂಕ.: 06–04–2026, ಸಮಯ: ಅಪರಾಹ್ನ 2.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ
ಆಸ್ತಿಯ ಪರಿವೀಕ್ಷಣಾ ದಿನಾಂಕ: 02–04–2026 ರಿಂದ 04–04–2026 ಸಮಯ ಬೆಳಿಗ್ಗೆ 11.00 ರಿಂದ ಸಂಜೆ 1.00 ಗಂಟೆಯವರೆಗೆ
ಆಸ್ತಿಯ ಬಿಡ್ ಏರಿಕೆ ಮೊತ್ತ: ರೂ. 50,000/– ಅಥವಾ ಅಂತಹ ಗುಣಾಕಾರಗಳಲ್ಲಿ

ಉದ್ದೇಶಿತ ಬಿಡ್ಡುದಾರರು ಮಾರಾಟದ ನಿಯಮ ಮತ್ತು ನಿಬಂಧನೆಗಳ ವಿವರಗಳಿಗೆ ವೆಬ್‌ಸೈಟ್ ಲಿಂಕ್: https://www.bankofbaroda.in/e-auction.htm and https://baanknet.com ಅಥವಾ ಅಧಿಕೃತ ಅಧಿಕಾರಿ, ಮಡಿಕೇರಿ ಶಾಖೆ, ಮೊಬೈಲ್: 9035756655 ಇವರನ್ನು ಸಂಪರ್ಕಿಸ ಬಹುದು.

ಸ್ಥಳ: ಮಡಿಕೇರಿ,
ದಿನಾಂಕ: 23–02–2026
ಸಹಿ/– ಅಧಿಕೃತ ಅಧಿಕಾರಿ,
ಬ್ಯಾಂಕ್ ಆಫ್ ಬರೋಡ

## ರಕ್ಷಣಾ ತಡೆಗೋಡೆ ಕಾಮಗಾರಿಗೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ

**ಮಡಿಕೇರಿ:** ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಫೆ. 25 ರಂದು ಮಧ್ಯಾಹ್ನ 12.30ಕ್ಕೆ ರಾಷ್ಟ್ರೀಯ ಹೆದ್ದಾರಿ-275 ರ 78 ಕಿ.ಮೀ.ನಿಂದ 125 ಕಿ.ಮೀ. ವರೆಗಿನ ಆಯ್ದ 21 ಭಾಗಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ರಕ್ಷಣಾ ತಡೆಗೋಡೆಗಳ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಭಾರತ ಸರ್ಕಾರ
ಸಾಲ ವಸೂಲಾತಿ ನ್ಯಾಯಾಧಿಕರಣ–1, ಬೆಂಗಳೂರು
4ನೇ ಮಹಡಿ, ಟೆಲಿಫೋನ್ ಹೌಸ್ ಬಿಲ್ಡಿಂಗ್, ರಾಜಭವನ ರಸ್ತೆ, ಬೆಂಗಳೂರು – 560 001.

ಡಿಆರ್‌ಸಿ ನಂ.14334
ಫಾರಂ ನಂ. 14
(ರೆಗ್ಯುಲೇಷನ್ 33(2))

**ಕರ್ನಾಟಕ ಬ್ಯಾಂಕ್ ಲಿ.,** ಬಂಟ್ವಾಳ ಮೂಡ ಶಾಖೆ, ಮೊದಲ ಮಹಡಿ, ಕಾರ್ತಿಕ್ ಕಾಂಪ್ಲೆಕ್ಸ್, ಅಂಚೆ ಜೋಡುಮಾರ್ಗ, ಬಂಟ್ವಾಳ ಮೂಡಾ – 574 219 ,ದಕ್ಷಿಣ ಕನ್ನಡ ಜಿಲ್ಲೆ **... ಸರ್ಟಿಫಿಕೇಟ್ ಹೋಲ್ಡರ್**
**ವಿರುದ್ಧ**
**ಮೆ. ಇಂಡಿಯನ್ ಹಾರ್ಡ್‌ವೇರ್** **... ಪ್ರತಿವಾದಿ/ಸರ್ಟಿಫಿಕೇಟ್ ಡೆಟರ್ಸ್**

ಡಿಮ್ಯಾಂಡ್ ನೋಟೀಸು

**ಇವರಿಗೆ :**
**1. ಮೆ. ಇಂಡಿಯನ್ ಹಾರ್ಡ್‌ವೇರ್,** ಪ್ರತಿನಿಧಿಸುವವರು ಇದರ ಮಾಲೀಕರಾದ ಶ್ರೀ ಎ. ಆರ್. ಅಬ್ದುಲ್ ರಹಿಮಾನ್ ಆಲಿಯಾಸ್ ಶ್ರೀ ಅಬ್ದುಲ್ ರಹಿಮಾನ್ ಆಲಿಯಾಸ್ ಜಕ್ರಿಬೆಟ್ಟು ಅಬ್ದುಲ್ ರಹಿಮಾನ್ ಬಿನ್ ಶ್ರೀ ಕುನ್ಹುಮೊನು ಆಲಿಯಾಸ್ ಶ್ರೀ ಕುಂಚಿ ಮೋನು ಆಲಿಯಾಸ್ ಶ್ರೀ ಕುನ್ಹಿಮೋನು.
**ವ್ಯವಹಾರದ ಸ್ಥಳ :** ನಂ. 13–357/ಎ ಮತ್ತು 13–357/ಡಿ, ಮಾಸ್ಟರ್ ಕಾಂಪ್ಲೆಕ್ಸ್, ಮಿತ್ತಬೈಲ್, ಕೈಕಂಬ ಜೋಡುಮಾರ್ಗ ಅಂಚೆ, ಬಂಟ್ವಾಳ – 574 219.
**ವಾಸ :** ನಂ. 6–51/ಎ, ಜಕ್ರಿಬೆಟ್ಟು ಮನೆ, ಬಂಟ್ವಾಳ ಕಸಬಾ ಗ್ರಾಮ, ಬಂಟ್ವಾಳ – 574 211.
ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ಪ್ರಾಧಿಕಾರ, ಬೆಂಗಳೂರು ಇವರು **ಒ.ಎ. ನಂ. 299/2017** ರಲ್ಲಿ ದಿನಾಂಕ 10.09.2018ರಂದು ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ **ರೂ.14,43,210.50** (ರೂಪಾಯಿ ಹದಿನಾಲ್ಕು ಲಕ್ಷದ ನಲವತ್ತ ಮೂರು ಸಾವಿರದ ಇನ್ನೂರ ಹತ್ತು ಮತ್ತು ಪೈಸೆ ಐವತ್ತು ಮಾತ್ರ) ಜೊತೆಗೆ ಒ.ಎ ಜಾರಿ ಮಾಡಿದ ದಿನಾಂಕದಿಂದ ಪೂರ್ತಿಪಾವತಿಯ ದಿನಾಂಕದವರೆಗಿನ ರಿಕವರಿ ಸರ್ಟಿಫಿಕೇಟ್‌ನಲ್ಲಿನ ಮೊತ್ತ, ಬಡ್ಡಿ ಮತ್ತು ಇತರ ವೆಚ್ಚ ನಿಮ್ಮಿಂದ ಬಾಕಿ ಇರುತ್ತದೆ.
ನೀವು ಸದರಿ ಮೊತ್ತವನ್ನು ಈ ಪ್ರಕಟಣೆ ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.
ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ :
ಎ. ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನುಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿರುವಂತಹ ಬಡ್ಡಿ ಮೊತ್ತ, ಬಿ. ಈ ನೋಟೀಸನ್ನು ಜಾರಿ ಮಾಡಲು ಮತ್ತು ಇತರ ಪ್ರಕ್ರಿಯೆ ಹಾಗೂ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.
ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **05.10.2018** ರಂದು ಕೊಡಲ್ಪಟ್ಟಿದೆ.
**ಸಹಿ/- ವಸೂಲಾತಿ ಅಧಿಕಾರಿ- 1**
ಸಾಲ ವಸೂಲಾತಿ ನ್ಯಾಯಾಧಿಕರಣ –1, ಬೆಂಗಳೂರು

**ಗಮನಿಸಿ :** ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1)ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ.

### ಆತುರದ ಕ್ರಮ ಕೈಗೊಳ್ಳದಂತೆ ಆದೇಶ

# ನಟ ರಣವೀರ್‌ಗೆ ಹೈಕೋರ್ಟ್ ತರಾಟೆ

ಪ್ರಜಾವಾಣಿ ವಾರ್ತೆ

ನ್ಯಾಯಮೂರ್ತಿ ಎಂ.ನಾಗಪ್ರಸನ್ನ

**ಬೆಂಗಳೂರು:** 'ನೀವು ರಣವೀರ್ ಸಿಂಗ್ ಅಥವಾ ಸೂಪರ್ ಸ್ಟಾರ್ ಇರಬಹುದು. ಆದರೆ, ಸಾರ್ವಜನಿಕರ ಮುಂದೆ ನಿಂತು ಮಾತನಾಡುವಾಗ ನಾಲಗೆ ಮೇಲೆ ಹತೋಟಿ ಇಟ್ಟುಕೊಂಡಿರಬೇಕು. ನೆದರು ತಪ್ಪಿ ಆಡಿದ ಹಗುರ ಮಾತಿಗೆ ಕ್ಷಮೆ ಕೇಳಿದ್ದೇನೆ ಎಂದಾಕ್ಷಣ ಅದು ಮಾಸಿ ಹೋಗುವುದಿಲ್ಲ. ತಪ್ಪನ್ನು ಮನ್ನಿಸಿದಂತಾಗುವುದಿಲ್ಲ. ಜನರ ಮನಸ್ಸಿನಿಂದ ನೆನಪುಗಳನ್ನು ಅಳಿಸಬಹುದು. ಆದರೆ ಇಂಟರ್‌ನೆಟ್‌ನಿಂದ ಅಳಿಸಲಾಗದು ಎಂಬುದನ್ನು ಮರೆಯಬೇಡಿ...!

'ನನ್ನ ವಿರುದ್ಧ ನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ದಾಖಲಾಗಿರುವ ಖಾಸಗಿ ದೂರು ಮತ್ತು ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಾಲಿವುಡ್ ನಟ ರಣವೀರ್ ಸಿಂಗ್ (41) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಮಂಗಳವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಅರ್ಜಿದಾರ ರಣವೀರ್ ಸಿಂಗ್ ಅವರನ್ನು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡ ಪರಿಯಿದು.

'ನೀವು ಸೂಪರ್ ಸ್ಟಾರ್ ಆಗಿದ್ದರೇನಂತೆ? ಕಾನೂನಿಗೆ ಮಿಗಿಲಾದವರೇನೂ ಅಲ್ಲ. ದೈವವನ್ನು ದೆವ್ವ ಎನ್ನಲಾಗದು. ಇನ್ನೊಬ್ಬರ ಭಾವನೆಗೆ ಘಾಸಿ ಮಾಡುವ ಅಧಿಕಾರ ನಿಮಗಿಲ್ಲ. ಚಾಮುಂಡಿ, ಕರಾವಳಿ ಭಾಗದ ಜನರ ಪಾಲಿನ ಪವಿತ್ರ ದೈವರಾಧನೆ. ರಿಷಬ್ ಶೆಟ್ಟಿ ದೇವತೆ ಚಾಮುಂಡಿಯ ಪಾತ್ರವನ್ನು ನಿಭಾಯಿಸಿದ್ದಾರೆ. ರಿಷಬ್ ಅವರನ್ನು ಮೆಚ್ಚಿ ಮಾತಾಡುವ ಜೊತೆಗೆ ನೀವು ಅವರ ನಟನೆಯನ್ನು ಮಹಿಳಾ ದೆವ್ವ ಎಂದು ಅಣಕಿಸಿದ್ದೀರಿ. ಇವೆಲ್ಲಾ ನಿಮಗೆ ಗೊತ್ತಿಲ್ಲದೆ ಮಾತಾಡಿದ್ದೀರಿ ಎಂದರೂ, ಜನರ ಮೇಲೆ ಪ್ರಭಾವ ಬೀರಬಲ್ಲ ನಟ ನೀವು. ನಾನೇನೇ ಮಾತಾಡಿದರೆ ಜನರ ಮನಸ್ಸಿನಲ್ಲಿ ಬೇರೂರುತ್ತದೆ ಎಂಬುದರ ಅರಿವು ನಿಮಗಿರಬೇಕಿತ್ತು. ಜವಾಬ್ದಾರಿ ಮೆರೆಯಬೇಕಿತ್ತು. ಯಾರೇ ಆಗಲಿ ಧಾರ್ಮಿಕ ಭಾವನೆಗಳಿಗೆ ನೋವುಂಟು ಮಾಡುವ ಕೃತ್ಯಕ್ಕೆ ದಯೆ ತೋರಿಸಲು ಆಗದು' ಎಂದು ನ್ಯಾಯಮೂರ್ತಿ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ರಣವೀರ್ ಪರ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ, 'ಅರ್ಜಿದಾರರು ಉದ್ದೇಶಪೂರ್ವಕವಾಗಿ ಈ ಹೇಳಿಕೆ ನೀಡಿಲ್ಲ. ಈಗಾಗಲೇ ಅವರು ತಾವಾಡಿದ ಆಕ್ಷೇಪಾರ್ಹ ಮಾತುಗಳಿಗೆ ಕ್ಷಮೆ ಕೋರಿದ್ದಾರೆ. ಆಗಿರುವ ಪ್ರಮಾದ ಸರಿಪಡಿಸಲು ಸಿದ್ಧರಿದ್ದಾರೆ' ಎಂದರು

ವಾದ ಆಲಿಸಿದ ನ್ಯಾಯಪೀಠ, 'ರಣವೀರ್ ತನಿಖೆಗೆ ಸಹಕರಿಸಬೇಕು ಎಂಬ ಷರತ್ತಿನೊಂದಿಗೆ ಮುಂದಿನ ವಿಚಾರಣೆವರೆಗೂ ಪ್ರಾಸಿಕ್ಯೂಷನ್ ರಣವೀರ್ ವಿರುದ್ಧ ಆತುರದ ಕ್ರಮಕ್ಕೆ ಮುಂದಾಗಬಾರದು' ಎಂದು ಆದೇಶಿಸಿತು. ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ, ಅರ್ಜಿಗೆ ಸಂಬಂಧಿಸಿದಂತೆ ಆಕ್ಷೇಪಣೆ ಸಲ್ಲಿಸಲು ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಅವರಿಗೆ ನಿರ್ದೇಶಿಸಿತು. ವಿಚಾರಣೆಯನ್ನು ಮಾರ್ಚ್ 2ಕ್ಕೆ ಮುಂದೂಡಲಾಗಿದೆ. ರಣವೀರ್ ಪರ ಹೈಕೋರ್ಟ್ ವಕೀಲ ಮನು ಪ್ರಭಾಕರ್ ಕುಲಕರ್ಣಿ ವಕಾಲತ್ತು ವಹಿಸಿದ್ದಾರೆ.

### ದೈವವನ್ನು ದೆವ್ವ ಎಂದ ಆರೋಪ

ಗೋವಾದಲ್ಲಿ 2025ರ ನವೆಂಬರ್ 28ರಂದು 'ಭಾರತೀಯ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವ'ದ (ಐಎಫ್‌ಎಫ್‌ಐ) ಸಮಾರೋಪ ಸಮಾರಂಭ ಜರುಗಿತ್ತು. ಈ ಸಂದರ್ಭದಲ್ಲಿ ರಣವೀರ್ ಸಿಂಗ್, 'ಕಾಂತಾರ ಚಾಪ್ಟರ್-1' ಕುರಿತು ಮಾತನಾಡಿದ್ದರು.

'ಪಂಜುರ್ಲಿ, ಗುಳಿಗ ದೈವಗಳ ದೈವೀಕ ಅಭಿವ್ಯಕ್ತಿಯನ್ನು ಒರಟು, ಹಾಸ್ಯಮಯ ಮತ್ತು ಅವಹೇಳನಕಾರಿ ರೀತಿಯಲ್ಲಿ ಅಣಕಿಸಿದ್ದಾರೆ. ಚಾಮುಂಡಿ ದೈವವನ್ನು ಹೆಣ್ಣು ದೆವ್ವ ಎಂದು ಕರೆದು ಅಪಮಾನ ಮಾಡಿದ್ದಾರೆ' ಎಂದು ನಗರದ ವಕೀಲ ಪ್ರಶಾಂತ್ ಮೆಥಲ್ 1ನೇ ಹೆಚ್ಚುವರಿ ಚೀಫ್ ಜ್ಯುಡಿಷಿಯಲ್ ಮ್ಯಾಜಿಸ್ಟ್ರೇಟ್ (ಸಿಜೆಎಂ) ನ್ಯಾಯಾಲಯದಲ್ಲಿ ಖಾಸಗಿ ದೂರುದಾಖಲಿಸಿದ್ದರು. ದೂರಿನ ವಿಚಾರಣೆ ನಡೆಸಿದ್ದ ಸಿಜೆಎಂ ನ್ಯಾಯಾಲಯ ತನಿಖೆ ನಡೆಸುವಂತೆ 2026ರ ಜನವರಿ 23ರಂದು ಪೊಲೀಸರಿಗೆ ನಿರ್ದೇಶಿಸಿತ್ತು. ಇದರನ್ವಯ ಹೈಗ್ರೌಂಡ್ಸ್ ಠಾಣಾ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ. ವಿಚಾರಣೆಗೆ ಹಾಜರಾಗಲು ರಣವೀರ್ ಸಿಂಗ್ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ.